# ಪ್ರ.61/ಎ. ಇತರೆ ಸಮಿತಿಗಳು

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ ರಾಜ್ ಅಧಿನಿಯಮ 1993.

- ಪ್ರ.ಕರಣ 61/ಎ. ರ ಅಡಿಯಲ್ಲಿ ಗ್ರಾಮ ಪಂಚಾಯತಿಗಳು ಯಾವುದೇ ಉದ್ದೇಶಕ್ಕಾಗಿ, ನಿರ್ಧರಿಸಬಹುದಾದಂತಹ ಸದಸ್ಯರುಗಳನ್ನು ಒಳಗೊಂಡಿರುವ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸಮಿತಿಗಳನ್ನು ರಚಿಸಬಹುದಾಗಿದೆ. ಈ ಸಮಿತಿಗಳು ವಿಕೇಂದ್ರಿಕರಣದ ತತ್ವಕ್ಕೆ ಪೂರಕವಾಗಿರುತ್ತದೆ ಮತ್ತು ಗ್ರಾಮ ಸ್ವರಾಜ್ ಪರಿಕಲ್ಪನೆಗೆ ಪುಷ್ಠಿಯನ್ನು ನೀಡುತ್ತದೆ.
- ಹಾಗೆಯೇ ನೇಮಕ ಮಾಡಲಾದ ಸಮಿತಿಗಳಲ್ಲಿ ಯಾವ ಉದ್ದೇಶಕ್ಕಾಗಿ ಸಮಿತಿಯನ್ನು ನೇಮಕ ಮಾಡಲಾಗಿದೆಯೋ ಅದನ್ನು ಈಡೇರಿಸುವದಕ್ಕೆ ಅವಶ್ಯಕ ಅಥವಾ ಉಪಯುಕ್ತವಾಗಬಹುದಾದಂತಹ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಬಹುದಾಗಿದೆ.
- ಈ ಸಮಿತಿಗಳು ತನ್ನ ವ್ಯಾಪ್ತಿಯ ಪಂಚಾಯತಿಯ ಸದಸ್ಯರುಗಳನ್ನು ಹೊರತುಪಡಿಸಿ ಆ ಪ್ರದೇಶದ ನಿವಾಸಿಗಳನ್ನು ಕೂಡ ಆಯ್ಕೆ ಮಾಡಬಹುದಾಗಿದೆ.

## ಗ್ರಾಮ ಪಂಚಾಯತಿಯಲ್ಲಿ ಇರಬೇಕಾದ ಉಪ ಸಮಿತಿಗಳು:–

### I. ಬಾಲ ವಿಕಾಸ ಸಲಹಾ ಮೇಲ್ವಿಚಾರಣಾ ಸಮಿತಿ: (ಪ್ರತಿ ಅಂಗನವಾಡಿಗೆ–1 ರಂತೆ) – ಒಟ್ಟು 10 ಜನ ಸದಸ್ಯರನ್ನು ಹೊಂದಿರುವಂತಹ ಒಂದು ಸಮಿತಿ

**ಉಲ್ಲೇಖ: ಸರ್ಕಾರದ ಆದೇಶ ಸಂ.ಮಮಿ. 81ಐ.ಸಿ.ಡಿ.2014 ಬೆಂಗಳೂರು ದಿ:19.01.2016**

| | | |
|---|---|---|
| 1 | ವಾರ್ಡ ಸದಸ್ಯರು | ಅದ್ಯಕ್ಷರು |
| 2 | ಮುಖ್ಯೋಪಾಧ್ಯಾಯರು | ಸದಸ್ಯರು |
| 3 | ಸ್ತ್ರೀ ಶಕ್ತಿ ಗುಂಪುಗಳ ಪ್ರತಿನಿದಿ | ಸದಸ್ಯರು |
| 4 | ಮಕ್ಕಳ ತಾಯಂದಿರು | ಒಬ್ಬರು ಪರಿಶಿಷ್ಟ ಜಾತಿ, & ಒಬ್ಬರು ಪರಿಶಿಷ್ಟ ವರ್ಗ)ಜನ ಸದಸ್ಯರು(ಸಮಿತಿಯ ಅದ್ಯಕ್ಷರು ಆಯ್ಕೆ ಮಾಡುವದು) |
| 5 | ಸಮೂದಾಯ ಆದಾರಿತ ಸಂಸ್ಥೆಯ ಪ್ರತಿನಿಧಿ: | 1 ಸದಸ್ಯರು |
| 6 | ಆರೋಗ್ಯ ಸಹಾಯಕಿ | 1 ನಾಮ ನಿರ್ದೇಶಿತ ಸದಸ್ಯರು |
| 7 | ಅಂಗನವಾಡಿ ಕಾರ್ಯಕರ್ತೆ | 1 ಸದಸ್ಯ ಕಾರ್ಯದರ್ಶಿ |

ಸಮಿತಿಯ ಅವದಿ ಮೂರು ವರ್ಷ ಕನಿಷ್ಠ ತಿಂಗಳಿಗೊಂದು ಸಭೆಯನ್ನು ಆಯೋಜಿಸುವುದು.

### II. ಆಹಾರ ಖಾತರಿ ಸಮಿತಿ; (ಗ್ರಾ.ಪಂ.ಗೆ 1 ರಂತೆ) ಒಟ್ಟು 5 ಜನ ಸದಸ್ಯರು.

- 1) ಸಾಮಾಜಿಕ ನ್ಯಾಯ ಸಮಿತಿ ಅದ್ಯಕ್ಷರು 1 ಅದ್ಯಕ್ಷರು
- 2) ಗ್ರಾ.ಪಂ. ಸದಸ್ಯ (ಪ.ಜಾ.) 1 ಸದಸ್ಯರು
- 3) ಗ್ರಾ.ಪಂ. ಸದಸ್ಯ (ಪ.ಪಂ.) 1 ಸದಸ್ಯರು
- 4) ಗ್ರಾ.ಪಂ. ಮಹಿಳಾ ಸದಸ್ಯೆ 1 ಸದಸ್ಯರು
- 5) ಗ್ರಾ.ಪಂ. ಪಿಡಿಓ/ಕಾರ್ಯದರ್ಶಿ 1 ಪದ ನಿಮಿತ್ತ ಕಾರ್ಯದರ್ಶಿ

## III.ಆಹಾರ ಜಾಗೃತ ಸಮಿತಿ; (ನ್ಯಾಯಬೆಲೆ ಅಂಗಡಿಗೆ 1 ರಂತೆ) ಒಟ್ಟು 7 ಜನ ಸದಸ್ಯರು.

- 1) ಮಹಿಳಾ ಕಾರ್ಡುದಾರರು ಬಿಪಿಎಲ್/ಅಂತ್ಯೋದಯ 4 ಜನ
- 2) ಆ ಪ್ರದೇಶದ ಗ್ರಾ.ಪಂ. ಸದಸ್ಯ ಅಧ್ಯಕ್ಷರು 1
- 3) ನ್ಯಾಯ ಬೆಲೆ ಅಂಗಡಿ ಸಂಚಾಲಕರು ಕಾರ್ಯದರ್ಶಿ1

## IV.ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ; (ಗ್ರಾಮಕ್ಕೆ 1 ರಂತೆ) ಒಟ್ಟು –15

| | | |
|---|---|---|
| 1 | ಗ್ರಾಮಪಂಚಾಯತಿ ಅಧ್ಯಕ್ಷರು/ಸದರಿ ಗ್ರಾಮದ ಪಂ. ಸದಸ್ಯರು | 1ಅದ್ಯಕ್ಷರು |
| 2 | ಸದರಿ ಗ್ರಾಮದ ಇತರೆ ಪಂ. ಸದಸ್ಯರು– | 1ಸದಸ್ಯರು(ಉಪಾದ್ಯಕ್ಷರು |
| 3 | ಸದರಿ ಗ್ರಾಮದ ಉಳಿದ ಎಲ್ಲಾ ಪಂಚಾಯತಿ ಸದಸ್ಯರು – | ಸದಸ್ಯರುಗಳು |
| 4 | ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ – | ಸದಸ್ಯ ಕಾರ್ಯದರ್ಶಿ |
| 5 | ಗ್ರಾಮಪಂಚಾಯತಿಗೆ ಸಂಭಂದಪಟ್ಟ ಸಹಾಯಕ/ಕಿರಿಯ ಅಭಿಯಂತರರು | –ಪದನಿಮಿತ್ತ ಸದಸ್ಯರು |
| 6 | ಗ್ರಾಮ ವ್ಯಾಪ್ತಿಯ ಕಿರಿಯ ಆರೋಗ್ಯ ಸಹಾಯಕಿ– | ಪದನಿಮಿತ್ತ ಸದಸ್ಯರು |
| 7 | ಸದರಿ ಗ್ರಾಮದ ಹಿರಿಯ ಮುಖಂಡರು | –ಸದಸ್ಯರುಗಳು |
| 8 | ಸದರಿ ಗ್ರಾಮದ ಸರ್ಕಾರೇತರ ಪ್ರತಿನಿಧಿ– | ಸದಸ್ಯರು |
| 9 | ಸದರಿ ಗ್ರಾಮದ ಸಭೆಯಲ್ಲಿ ಆಯ್ಕೆಯಾದವರು– | 8 ಜನ ಸದಸ್ಯರು |
| 10 | ಆರೋಗ್ಯ ಕಾರ್ಯಕರ್ತರು | 1 (ಪದನಿಮಿತ್ತ ಸದಸ್ಯರು) |

- ಮಹಿಳೆಯರಿಗರಿಗೆ ಸಮಾನ ಸಂಖ್ಯೆಯ ಅವಕಾಶ
- ಎಲ್ಲಾ ಜಾತಿ ವರ್ಗದವರಿಗೂ ಪ್ರಾತಿನಿಧ್ಯವಿರಬೇಕು
- ಸಮಿತಿಯ ಕಾಲಾವದಿಯು ಐದು ವರ್ಷಗಳು
- ಅದ್ಯಕ್ಷ/ಉಪಾದ್ಯಕ್ಷ/ಖಜಾಂಚಿ ಪೈಕಿ 1 ಮಹಿಳೆ ಕಡ್ಡಾಯ

## V.ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ/ ಗ್ರಾಮ ಆರೋಗ್ಯ ಯೋಜನಾ ಮತ್ತು ಮಾನಿಟರಿಂಗ್ ಸಮಿತಿ; (ಪ್ರತಿ ಕಂದಾಯ ಗ್ರಾಮಕ್ಕೆ 1 ರಂತೆ) ಒಟ್ಟು – 15

**ಉಲ್ಲೇಖ: ಸರ್ಕಾರದ ಆದೇಶ ಆಕುಕ 17 ಎಪ್.ಪಿ.ಆರ್ 2009 ಬೆಂಗಳೂರು, ದಿನಾಂಕ:26–02–2009**

| | | |
|---|---|---|
| 1 | ಸ್ಥಳೀಯ ಗ್ರಾಮಪಂಚಾಯತಿಯ ಸದಸ್ಯ | **1ಅದ್ಯಕ್ಷರು** |
| 2 | ಗ್ರಾಮ ಸಭೆಯಿಂದ ಆಯ್ಕೆಯಾದ – | **15 ಜನ ಸದಸ್ಯರು** |
| 3 | ಆಯಾ ಗ್ರಾಮದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ | **ಪದನಿಮಿತ್ತ ಸದಸ್ಯರು** |
| 4 | ಕಿರಿಯ ಪುರುಷ ಆರೋಗ್ಯ ಸಹಾಯಕ | |
| 5 | ಪ್ರಾಥಮಿಕ ಶಾಲಾ ಶಿಕ್ಷಕರು(ಮಹಿಳೆಯರಿಗೆ ಆದ್ಯತೆ) | |
| 6 | ಗ್ರಾಮದಲ್ಲಿನ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು | |
| 7 | ಆಶಾ ಕಾರ್ಯಕರ್ತೆಯರು – | **ಸದಸ್ಯ ಕಾರ್ಯದರ್ಶಿ** |
| 8 | 15 ಜನ ಸದಸ್ಯರ ಪೈಕಿ 1/3 ನೇ ಒಂದರಷ್ಟು ಸದಸ್ಯರನ್ನು ಲಾಟಿ ಎತ್ತುವ ಮೂಲಕ ಮೊದಲನೇ ವರ್ಷದ ಅಂತ್ಯದಲ್ಲಿ ನಿವೃತ್ತರಾಗತಕ್ಕದ್ದು, ಅವರ ಸ್ಥಾನಕ್ಕೆ ಗ್ರಾಮ ಸಭೆಯೀಮದ 5 ಜನರ ಹೊಸ ಸದಸ್ರ ಆಯ್ಕೆಯಾಗತಕ್ಕದ್ದು | |

| | |
|---|---|
| **9** | ಹೀಗೆಯೇ ಎರಡು ಮತ್ತು ಮೂರನೇ ವರ್ಷಾಂತ್ಯಕ್ಕೆ ಮುಂದುವರೆಯುವುದು |

## VI.ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ಯೋಜನಾ ಮತ್ತು ಮಾನಿಟರಿಂಗ್ ಸಮಿತಿ

**ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ಯೋಜನಾ ಮತ್ತು ಮಾನಿಟರಿಂಗ್ ಸಮಿತಿಯು ಕೆಳಕಂಡಂತೆ ಸದಸ್ಯರನ್ನು ಹೊಂದಿರತಕ್ಕದ್ದು.**

**ಉಲ್ಲೇಖ: ಸರ್ಕಾರದ ಆದೇಶ ಆಕುಕ 17 ಎಫ್.ಪಿ.ಆರ್ 2009 ಬೆಂಗಳೂರು, ದಿನಾಂಕ:26–02–2009**

| | | |
|---|---|---|
| **1** | ಪ್ರಾಥಮಿಕ ಆರೋಗ್ಯ ಕೇಂದ್ರ , ಕೇಂದ್ರ ಸ್ಥಾನದ ಗ್ರಾಮ ಪಂಚಾಯತಿಯ ಅಧ್ಯಕ್ಷರು | ಅಧ್ಯಕ್ಷರು |
| **2** | ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಯಲ್ಲಿರುವ ಎಲ್ಲಾ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಿಂದ ಸಮಿತಿಗೊಬ್ಬರಂತೆ ನಾಮನಿರ್ದೇಶಿತರಾದ ಸದಸ್ಯರು | ಸದಸ್ಯರು |
| **3** | ಪ್ರಾಥಮಿಕ ಆರೋಗ್ಯ ಕೇಂದ್ರ ಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯತಿಯ ಅಧ್ಯಕ್ಷರು | ಸದಸ್ಯರು |
| **4** | ಪ್ರಾಥಮಿಕ ಆರೋಗ್ಯ ಕೇಂದ್ರ ಇರುವ ಗ್ರಾಮದ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯಿಂದ ನೇಮಕಗೊಂಡ ಪದನಿಮಿತ್ತ ಸದಸ್ಯರು | ಸದಸ್ಯರು |
| | ➢ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದ ಮಹಿಳಾ ಸದಸ್ಯ ಪ್ರತಿನಿಧಿ | ಸದಸ್ಯರು |
| | ➢ ಹಿಂದುಳಿದ/ ಅಲ್ಪ ಸಂಖ್ಯಾತ ಮಹಿಳಾ ಸದಸ್ಯ ಪ್ರತಿನಿಧಿ | ಸದಸ್ಯರು |
| | ➢ ಸಾಮಾನ್ಯ ವರ್ಗದ ಮಹಿಳಾ ಸದಸ್ಯ ಪ್ರತಿನಿಧಿ | ಸದಸ್ಯರು |
| **5** | ಅಂಗನವಾಡಿ ಮೇಲ್ವಿಚಾರಕಿ | ಸದಸ್ಯರು |
| **6** | ಪ್ರಾಥಮಿಕ ಆರೋಗ್ಯ ಕೇಂದ್ರ ಇರುವ ಗ್ರಾಮದ, ಪ್ರಾಥಮಿಕ ಸೆಕೆಂಡರಿ ಶಾಲೆಯ ಮುಖ್ಯೋಪಾಧ್ಯಾಯರು | ಸದಸ್ಯರು |
| **7** | ಪ್ರಾಥಮಿಕ ಆರೋಗ್ಯ ಕೇಂದ್ರದ ಕೇಂದ್ರ ಸ್ಥಾನದ ಹಿರಿಯ ಮಹಿಳಾ ಆರೋಗ್ಯ ಸಹಾಯಕಿ | ಸದಸ್ಯರು |
| **8** | ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈಧ್ಯಾದಿಕಾರಿ | ಸದಸ್ಯರು ಕಾರ್ಯದರ್ಶಿ |
| **9** | ನೋಡಲ್ ಎನ್.ಜಿ.ಓ ಪ್ರತಿನಿಧಿ | ಸಹಾಯಕ ಸದಸ್ಯರು ಕಾರ್ಯದರ್ಶಿ |

## VII.ಆರೋಗ್ಯ ರಕ್ಷಾಸಮಿತಿ;

**ಉಲ್ಲೇಖ: ಸರ್ಕಾರದ ಆದೇಶ ಆಕುಕ 17 ಎಫ್.ಪಿ.ಆರ್ 2009 ಬೆಂಗಳೂರು, ದಿನಾಂಕ:26-02-2009**

ಪ್ರಾಥಮಿಕ ಆರೋಗ್ಯ ಕೇಂದ್ರದ **ಆರೋಗ್ಯ ರಕ್ಷಾಕವಚ ಕೆಳ ನಮೂದಿಸಿರುವ ಸದಸ್ಯರುಗಳನ್ನು ಹೊಂದಿರುವಂತೆ ಪುನರ್ ರಚಿಸತಕ್ಕದ್ದು**

| | | |
|---|---|---|
| **1** | ಪ್ರಾಥಮಿಕ ಆರೋಗ್ಯ ಕೇಂದ್ರ , ಕೇಂದ್ರ ಸ್ಥಾನದ ಗ್ರಾಮ ಪಂಚಾಯತಿಯ ಅಧ್ಯಕ್ಷರು | ಅಧ್ಯಕ್ಷರು |
| **2** | ಸ್ಥಳೀಯ ಆರೋಗ್ಯ ಯೋಜನಾ ಮತ್ತು ಮಾನಿಟರಿಂಗ್ ಸಮಿತಿಯಿಂದ ಆಯ್ದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯೆ | ಸದಸ್ಯರು |
| **3** | ಪಕ್ಕದ ಇನ್ನೊಂದು ಗ್ರಾಮದ ಆರೋಗ್ಯ ಯೋಜನಾ ಮತ್ತು ಮಾನಿಟರಿಂಗ್ ಸಮಿತಿಯಿಂದ ಆಯ್ದ ಹಿಂದುಳಿದ/ ಅಲ್ಪ ಸಂಖ್ಯಾತ ಮಹಿಳಾ ಸದಸ್ಯೆ | ಸದಸ್ಯರು |
| **4** | ಸ್ಥಳೀಯ ಗ್ರಾಮದ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಧ ವ್ಯಾಪ್ತಯಲ್ಲಿರುವ ಇತರೇ ಗ್ರಾಮದ ಮತ್ತು ಯಾವುದೇ ಆರೋಗ್ಯ ಯೋಜನಾ ಮತ್ತು ಮಾನಿಟರಿಂಗ್ ಸಮಿತಿಯಲ್ಲಿ ಸದಸ್ಯರಲ್ಲದ ಆದರೆ ತಾಯಿ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ಇರುವ ಪ್ರಗತಿ ಪರ ದೃಸ್ಡಿಕೋನವಿರುವ ಪುರುಷ ಅಥವಾ ಮಹಿಳೆ | ಸದಸ್ಯರು |
| **5** | ಸ್ಥಳೀಯ ಎನ್,ಜಿ,ಓ ಮಹಿಳಾ ಪ್ರತಿನಿಧಿ | ಸದಸ್ಯರು |
| **6** | ಅಂಗನವಾಡಿ ಮೇಲ್ವಿಚಾರಕಿ | ಸದಸ್ಯರು |
| **7** | ಪ್ರಾಥಮಿಕ ಆರೋಗ್ಯ ಕೇಂದ್ರದ ಇರುವ ಗ್ರಾಮದ , ಪ್ರಾಥಮಿಕ/ಸೆಕಂಡರಿ ಶಾಲೆಯ ಮುಖ್ಯೋಪಾದ್ಯಾಯರು | ಸದಸ್ಯರು |
| **8** | ಪ್ರಾಥಮಿಕ ಆರೋಗ್ಯ ಕೇಂದ್ರದ, ಕೇಂದ್ರ ಸ್ಥಾನದ ಹಿರಿಯ ಮಹಿಳಾ ಆರೋಗ್ಯ ಸಹಾಯಕಿ | ಸದಸ್ಯರು |
| **9** | ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾದಿಕಾರಿ | ಸದಸ್ಯರು ಕಾರ್ಯದರ್ಶಿ |

## VIII.ಜಲಾನಯನ ಅಭಿವೃದ್ದಿ ಸಮಿತಿ ಒಟ್ಟು ಸದಸ್ಯರು – 10 (ಯೋಜನೆ ಅನುಷಾಠನಗೊಳ್ಳುವ ಗ್ರಾಮಕ್ಕೆ 1 ರಂತೆ)

| | | | |
|---|---|---|---|
| **1** | ಗ್ರಾ.ಪಂ. ಅದ್ಯಕ್ಷರು | 1 | ಅದ್ಯಕ್ಷರು |
| **2** | ಗ್ರಾ.ಪಂ. ಸದಸ್ಯರು | 4 | ಸದಸ್ಯರು |
| **3** | ಅಂ.ಕಾಕ. | 1 | ಸದಸ್ಯರು |
| **4** | ಎಸ್.ಹೆಚ್.ಜಿ. ಪ್ರತಿನಿದಿ | 2 | ಸದಸ್ಯರು |
| **5** | ಗ್ರಾ.ಪಂ. ಪಿಡಿಓ/ಕಾರ್ಯದರ್ಶಿ | 1 | ಕಾರ್ಯದರ್ಶಿ |
| **6** | ಸಹಾಯಕ ಕೃಷಿ ಅಧಿಕಾರಿ | 1 | ಖಜಾಂಚಿ |

## IX.ವಸತಿ ಸಮಿತಿ; ಗ್ರಾ.ಪಂ.ಗೆ 1 ರಂತೆ ಒಟ್ಟು –5 ಸದಸ್ಯರು (ಸರಕಾರದ ಸುತ್ತೋಲೆ ದಿ: 20/11/2004)

| | | |
|---|---|---|
| 1 | ಗ್ರಾ.ಪಂ. ಅದ್ಯಕ್ಷರು | 1 ಅದ್ಯಕ್ಷರು |
| 2 | ಗ್ರಾ.ಪಂ. ಉಪಾದ್ಯಕ್ಷ | 1 ಸದಸ್ಯರು |
| 3 | ಗ್ರಾ.ಪಂ. ಸದಸ್ಯರು ಪ.ಜಾ./ಪ.ಪಂ. | 1 ಸದಸ್ಯರು |
| 4 | ಗ್ರಾ.ಪಂ. ಮಹಿಳಾ ಸದಸ್ಯೆ | 1 ಸದಸ್ಯರು |
| 5 | ಗ್ರಾ.ಪಂ. ಪಿಡಿಓ/ಕಾರ್ಯದರ್ಶಿ | 1 ಕಾರ್ಯದರ್ಶಿ |
| 6 | | |

## X.ಶಾಲಾ ಅಭಿವೃದ್ದಿ ಮತ್ತು ಮೇಲುಸ್ತುವಾರಿ ಸಮಿತಿ. ಪ್ರತಿ ಶಾಲೆಗೆ 1 ರಂತೆ ಒಟ್ಟು 24 ಸದಸ್ಯರು

| | | |
|---|---|---|
| 1 | ತಂದೆ–ತಾಯಿ ಪರಿಷತ್‌ನಿಂದ (ಪ.ಜಾ–3 ಪ.ಪಂ.–1 ಅ.ಸಂ–01) | 18 ( ಶೇ,50 ರಷ್ಟು ಮಹಿಳೆ) |
| 2 | ಗ್ರಾಪಂ. ಸದ್ಯಸರು | 1 (ಪದನಿಮಿತ್ತ ಸದಸ್ಯರು) |
| 3 | ಶಾಲಾ ಮುಖ್ಯ ಗುರುಗಳು | 1 ಸದಸ್ಯ ಕಾರ್ಯದರ್ಶಿ |
| 4 | ಅಂಗನವಾಡಿ ಕಾರ್ಯಕರ್ತೆ | 1 (ಪದನಿಮಿತ್ತ ಸದಸ್ಯರು) |
| 5 | ಆರೋಗ್ಯ ಸಹಾಯಕರು | 1 (ಪದನಿಮಿತ್ತ ಸದಸ್ಯರು) |
| 6 | ಹಿರಿಯ ವಿದ್ಯಾರ್ಥಿ | 1 ಸದಸ್ಯರು |
| 7 | ಹಿರಿಯ ಶಿಕ್ಷಕ | 1 (ನಾಮ ನಿರ್ದೇಶಿತ ಸದಸ್ಯರು) |
| 8 | ಆಶಾ ಕಾರ್ಯಕರ್ತೆ | 1 (ನಾಮ ನಿರ್ದೇಶಿತ ಸದಸ್ಯರು) |
| 9 | * ಅದ್ಯಕ್ಷ ಮತ್ತು ಉಪಾದ್ಯಕ್ಷರ ಪೈಕಿ | ಒಂದು (1) ಮಹಿಳೆ ಕಡ್ಡಾಯ |
| | | |

| | |
|---|---|
| 1 | ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ 18 ಜನ ಪ್ರತಿನಿಧಿಗಳನ್ನು ಮಕ್ಕಳ ಪಾಲಕರು ಅಥವಾ ಪೋಷಕರಿಂದ ಆಯ್ಕೆ ಮಾಡಬೇಕು. |
| 2 | ಮುಖ್ಯೋಪಾಧ್ಯಾಯ ಅಥವಾ ಹಿರಿಯ ಉಪಾಧ್ಯಾಯರು ಪದನಿಮಿತ್ತ ಸದಸ್ಯ ಕಾರ್ಯದರ್ಶಿ ಯಾಗಿರಬೇಕು |
| 3 | ಶಾಲೆಯು ಇರುವ ಪ್ರದೇಶ ವ್ಯಾಪ್ತಿಯ ಆರೋಗ್ಯ ಕಾರ್ಯಕರ್ತೆ ಮತ್ತು ಅಂಗನವಾಡಿ ಕಾರ್ಯಕರ್ತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪದನಿಮಿತ್ತ ಸದಸ್ಯರಾಗಿರಬೇಕು |
| 4 | ಉಳಿದ 3 ಜನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರು ಈ ಕೆಳಕಂಡಂತೆ ತಿಳಿಸಿರುವ ವ್ಯಕ್ತಿಗಳ ಪೈಕಿ ನಾಮನಿರ್ದೇಶಿತ ಸದಸ್ಯರಾಗಿರಬೇಕು |
| 5 | ಸ್ಥಳೀಯ ಪ್ರಾಧಿಕಾರದ ಚುನಾಯಿತ ಸದಸ್ಯರಲ್ಲಿ, ಒಬ್ಬರನ್ನು ಸ್ಥಳೀಯ ಪ್ರಾಧಿಕಾರ ನಾಮ ನಿರ್ದೇಶನ ಮಾಡಬೇಕು<br>ಮತ್ತೊಬ್ಬ ಸದಸ್ಯನನ್ನು ಶಾಲಾ ಉಪಾಧ್ಯಾಯರ ಪೈಕಿ ಬಿ.ಇ.ಓ. ನಾಮ ನಿರ್ದೇಶನ ಮಾಡಬೇಕು |
| 6 | ಶಾಲೆಯ ಮಕ್ಕಳಲ್ಲಿ ಒಬ್ಬರನ್ನು ಬಿ.ಇ.ಓ. ನಾಮ ನಿರ್ದೇಶನ ಮಾಡಬೇಕು |
| 7 | ಶಾಲಾಭಿವೃದ್ದಿ ಮತ್ತು ಮೇಲುಸ್ತುವಾರಿ ಸಮಿತಿಯ ಒಟ್ಟು 24 ಸ್ಥಾನಗಳ ಪೈಕಿ ಶೇಕಡಾ 50ರಷ್ಟು;ಅಂದರೆ 12 ಜನ ಸದಸ್ಯರು ಮಹಿಳೆಯರಾಗಿರಬೇಕು.ಜೊತೆಗೆ ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ ಮತ್ತು ದುರ್ಬಲ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡತಕ್ಕದ್ದು |
| 8 | ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಪೋಷಕ ಅಥವಾ ಪಾಲಕರ ಚುನಾಯಿತ ಸದಸ್ಯರಲ್ಲೇ ಚುನಾಯಿತರಾಗಬೇಕು. |
| 9 | ಬಿ.ಇ.ಓ. ತನ್ನ ಕಾರ್ಯ ವ್ಯಾಪ್ತಿಯ ಎಲ್ಲಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯ ನಿರ್ವಹಿಸುವುದನ್ನು ಖಾತ್ರಿಗೊಳಿಸಲು ಸಮರ್ಥ ಪ್ರಾಧಿಕಾರವಾಗಿರುತ್ತಾರೆ |

| | |
|---|---|
| 10 | ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ತಿಂಗಳಲ್ಲಿ ಕೊನೆ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು ಮತ್ತು ಸಭೆಯ ನಡಾವಳಿಗಳನ್ನು ವರದಿ ಮಾಡಿಕೊಳ್ಳಬೇಕು ಮತ್ತು ಸಾರ್ವಜನಿಕರಿಗೆ ದೊರಕುವಂತೆ ಮಾಡತಕ್ಕದ್ದು |
| 11 | ಅಧ್ಯಕ್ಷ ಅಥವಾ ಉಪಾಧ್ಯಕ್ಷರೂ ಸೇರಿದಂತೆ ತಂದೆ–ತಾಯಿಯರ ಪರಿಷತ್ತಿನ 18 ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಟ ಪಕ್ಷ ಒಂಭತ್ತು ಸದಸ್ಯರು ಹಾಜರಿರತಕ್ಕದ್ದು |
| 12 | ಪದನಿಮಿತ್ತ ಸದಸ್ಯಲ್ಲಿ ಒಬ್ಬರು ಮತ್ತು ನಾಮ ನಿರ್ದೇಶಿತ ಸದಸ್ಯರಲ್ಲಿ ಇಬ್ಬರು ಹಾಜರಿರತಕ್ಕದ್ದು ಅವರ ಪೈಕಿ ವಿದ್ಯಾರ್ಥಿ ಹಾಜರಾತಿ ಕಡ್ಡಾಯ |
| 13 | ಈ ರೀತಿ ರಚನೆಯಾದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು<br>ಎ. ಶಾಲೆಯ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು<br>ಬಿ. ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವುದು ಮತ್ತು ಶಿಫಾರಸ್ಸು ಮಾಡುವುದು;<br>ಸಿ. ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಅನುದಾನಗಳ ಬಳಕೆಯ ಮೇಲ್ವಿಚಾರಣೆ ಮಾಡುವುದು; ಮತ್ತು,<br>ಡಿ. ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು |
| 14 | ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ನೀಡಲಾಗಿರುವ ಶಾಲೆಗಳಿಗೆ ನಿಗದಿಪಡಿಸಿದ ಗುಣಮಟ್ಟದ ವಿಧಿಗಳು ಮತ್ತು ಮಾನಕಗಳ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು.<br>ಶಾಲೆಯ ಅವಶ್ಯಕತೆಗಳನ್ನು ಗುರುತಿಸುವುದು ಮತ್ತು ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಮತ್ತು ಕಲಂ 4ರ ಉಪಬಂಧಗಳ ಕಾರ್ಯಗತಗೊಳಿಸುವುದನ್ನು ಮೇಲ್ವಿಚಾರಣೆ ಮಾಡುವುದು. |
| 15 | ನೆರೆ ಹೊರೆಯ ವಿಶೇಷ ಅಗತ್ಯವುಳ್ಳ ಶಾಲಾ ಮಕ್ಕಳು ಶಾಲೆಗೆ ಹೋಗಲು ಶಕ್ತವಾಗಲು ವಿಶೇಷ ಸೌಲಭ್ಯಗಳು ಅಂದರೆ ಶ್ರವಣ ಸಾಧನ ಇತ್ಯಾದಿಗಳನ್ನು ಕೊಡುವಾಗ ತಾರತಮ್ಯ ಮಾಡದಂತೆ ಖಾತರಿಗೊಳಿಸಬೇಕು. ಅಚಿಥಹ ಮಕ್ಕಳನ್ನು ಗುರುತಿಸಿ ಪಟ್ಟಿ ಮಾಡುವುದು. ವಿಶೇಷ ಅಗತ್ಯವುಳ್ಳ ಶಾಲಾ ಮಕ್ಕಳ ಕಲಿಕಾ ಸೌಲಭ್ಯಗಳನ್ನು ಮೇಲ್ವಿಚಾರಣೆ ಮಾಡಬೇಕು ಮತ್ತು ಪ್ರಾಥಮಿಕ ಶಿಕ್ಷಣದಲ್ಲಿ ಭಾಗಿಯಾಗುವುದು ಮತ್ತು ಪೂರ್ತಿಗೊಳಿಸುವುದನ್ನು ಖಾತ್ರಿಗೊಳಿಸಬೇಕು. |

## XI.ಮಹಿಳೆ ಮತ್ತು ಮಕ್ಕಳ ಸಾಗಣೆಯನ್ನು ತಡೆಗಟ್ಟಲು ರಚಿಸಲಾಗಿರುವ ಕಾವಲು ಸಮಿತಿ

**ಉಲ್ಲೇಖ: ಸರ್ಕಾರದ ಆದೇಶ ಸಂ.ಮಮ.ಇ. 34ಮಭಾಬ 2007(ಪಿ) ಬೆಂಗಳೂರು ದಿ: 28.06.2007**

### ಗ್ರಾಮ ಪಂಚಾಯತಿ ಮಟ್ಟದ ಸಮಿತಿ

| | | |
|---|---|---|
| **1** | ಗ್ರಾಮ ಪಂಚಾಯತಿ ಅಧ್ಯಕ್ಷರು | ಅಧ್ಯಕ್ಷರು |
| **2** | ಶಾಲಾ ಮುಖ್ಯೋಪಾದ್ಯಾಯರು<br>(ಮಹಿಳೆಯರಿಗೆ ಆದ್ಯತೆ ನೀಡುವುದು) | ಉಪಾಧ್ಯಕ್ಷರು |
| **3** | ಗ್ರಾಮ ಪಂಚಾಯತಿ ಕಾರ್ಯದರ್ಶಿ | ಸದಸ್ಯರು |
| **4** | ಗ್ರಾಮ ಲೆಕ್ಕಿಗರು(ಮಹಿಳೆಯರಿಗೆ ಆದ್ಯತೆ ನೀಡುವುದು) | ಸದಸ್ಯರು |
| **5** | ಅಂಗನವಾಡಿ ಕಾರ್ಯಕರ್ತರು | ಸದಸ್ಯರು |
| **6** | ಎ.ಎನ್.ಎಮ್ | ಸದಸ್ಯರು |
| **7** | ಸ್ತ್ರೀಶಕ್ತ ಸಂಘದ ಪ್ರತಿನಿಧಿಗಳು(ಪ್ರತಿ ಗ್ರಾಮದಿಂದ ಒಬ್ಬರು) | ಸದಸ್ಯರು |
| **8** | ಮಹಿಳಾ ಮಂಡಳಿಗಳ ಸದಸ್ಯರುಗಳು | ಸದಸ್ಯರು |
| **9** | ಯುವತಿ ಮಂಡಲಿಗಳ ಸದಸ್ಯರು | ಸದಸ್ಯರು |
| **10** | ಮೇಲ್ವಿಚಾರಕಿಯರು(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿ |